
ಪರಂಜ್ಯೋತಿ



# ನೆನಪು ಕಹಿಯಲ್ಲ!

ಶಿವರಾಮ ಕಾರಂತರ ವ್ಯಕ್ತಿತ್ವ, ಕಾರ್ಯ ವೈಖರಿಯ ಮೆಲುಕು

ದೊಡ್ಡವರಿಂದ ಮಾಡಿಸಿಕೊಳ್ಳುವ ತಮಾಷೆ ಸದಾ ನೆನಪಿನಲ್ಲಿ ಉಳಿಯುವಂಥದ್ದು ಹಾಗೂ ಸುಖಾನುಭವ ನೀಡುವಂಥದ್ದು. ನಂಜಿನ ಲೇಪವಿಲ್ಲದ, ನಿರ್ಮಲ ಮನಸ್ಸಿನ ತಮಾಷೆ. ಲೇಖಕ ಶಿವರಾಮ ಕಾರಂತರು ಮಾಡಿದ ತಮಾಷೆ ನನ್ನ ನೆನಪಿನಲ್ಲಿ ಈಗಲೂ ಉಳಿದಿದೆ !

1960ರ ದಶಕ, ಪುತ್ತೂರಿನಿಂದ ಪ್ರಕಟಣೆ ಪ್ರಾರಂಭಿಸಿದ್ದ 'ಇಂದ್ರಧನುಸ್' ಪತ್ರಿಕೆಯಲ್ಲಿ ಸಹಾಯಕ ಸಂಪಾದಕನಾಗಿ ಸೇರಿದ್ದೆ. ಮಳೆಗಾಲದ ದಿನಗಳು, ಮಾಯದಂಥ ಮಳೆ ಬಂದು ಜರಜರ ಹಿಂಡುವ, ಆದರೆ ನೀಲಗಿರಿಯಂತೆ ಚಳಿಯಿಂದ ನಡುಗಿಸುವ ಮಳೆಯಲ್ಲ. ಹಿತಕರವಾದ ಮಳೆ, ಕೆಲವು ನಿಮಿಷಗಳು ನಿಂತು, ಮತ್ತೆ ಹಿಂದಿರುಗುವ ಮಳೆ, ಬೀದಿಯ ತುಂಬ ಅರಳುವ ಕೊಡೆಗಳು. ಮಳೆಗೆಲ್ಲ ಒಂದಿಷ್ಟೂ ಕೇರ್ ಮಾಡದೆ ತಮ್ಮ ಪುಟ್ಟ ಕೊಡೆ ಬಿಡಿಸಿಕೊಂಡು ಚಿಲಿಪಿಲಿಗುಟ್ಟುತ್ತ ಶಾಲೆಯ ಕಡೆಗೆ ನಡೆಯುವ ಮಕ್ಕಳು.

ಗಡಿಬಿಡಿಯಿಲ್ಲದ ಪುತ್ತೂರು, ಹೊಸ ಸ್ಥಳವಾದರೂ ನನ್ನ ಪಾಲಿಗೆ ಆರಾಮ ತಾಣವೆನಿಸಿತ್ತು. ಮಂಜು ಮುಸುಕಿದ್ದ ಗುಡ್ಡಗಳ ಕಡೆಯಿಂದ ಬೆಳಕಿನ ಬಯಲಿಗೆ ಬಂದಂಥ ಅನುಭವ. ಅಪರಿಚಿತ ಮುಖಗಳು, ಹೊಸ ಪರಿಸರ, ಹೊಸ ಭಾಷೆಗಳು. ಮುದುಡಿದ್ದ ಮನಸ್ಸನ್ನು ತೆರೆದ ಹೊಸ ವಾತಾವರಣದಲ್ಲಿ ಹರಿದಾಡಲು ಬಿಡುವ ಅವಕಾಶ. ನನ್ನ ಮನಸ್ಸು ಬಯಸುತ್ತಿದ್ದದೂ ಅಂಥ ಅವಕಾಶವನ್ನೆ!

ಪುತ್ತೂರಿನಲ್ಲಿ ಮೊದಲ ದಿನ, ಮಧ್ಯಾಹ್ನದ ಊಟಕ್ಕೆಂದು ದಿನೇಶ ಭವನಕ್ಕೆ ಹೋದಾಗ ಒಂದು ಸ್ವಾರಸ್ಯಕರ ಪ್ರಸಂಗ ಜರುಗಿತು. ಎಲೆ ಹಾಕಿ, ಉಪ್ಪಿನಕಾಯಿ, ಪಲ್ಯ ಬಡಿಸಿದ ಮಾಣಿ 'ಕುಚ್ಚಲೊ ಬೆಳ್ತಿಗೆಯೊ?' ಎಂದು ಪ್ರಶ್ನಿಸಿದಾಗ, ನಾನು ಕಕ್ಕಾಬಿಕ್ಕಿಯಾಗಿ ಆತನ ಮುಖವನ್ನೇ ಮಿಕಿಮಿಕಿ ನೋಡಿದೆ. 'ಪಚ್ಚ!' ಎನ್ನುವಂತಾಯಿತು ನನ್ನ ಪರಿಸ್ಥಿತಿ! ಜೊತೆಗೆ ಬಂದಿದ್ದ ಗಣಪತಿ ಭಟ್ ಆ ಪೇಚಿನಿಂದ ನನ್ನನ್ನು ಪಾರು ಮಾಡಿದರು. ಕುಸುಬಲಕ್ಕಿ ಅನ್ನವೋ ಅಥವಾ ಬೆಣತಕ್ಕಿ ಅನ್ನವೋ ಎಂಬುದು ಆ ಮಾತಿನ ಅರ್ಥ!

ಕರಾವಳಿಯ ನಳಿನ ಕನ್ನಡ, ಹವ್ಯಕರ ಕನ್ನಡ, ತನ್ನದೇ ಗತ್ತು ಮತ್ತು ಸ್ಥಳೀಯ ಬನಿಯನ್ನು ಹೊಂದಿರುವ ತುಳು, ಸಂಗೀತಮಯ ಕೊಂಕಣಿ, ನಮ್ಮ ಟೈಪಿಸ್ಟ್ ಅಹಮದ್‌ನ ಬ್ಯಾರಿ ಭಾಷೆ ಹೀಗೆ ಹಲವು ಭಾಷೆಗಳಿಗೆ ನನ್ನ ಕಿವಿಗಳು ತೆರೆದುಕೊಂಡವು, ಈ ಭಾಷೆಗಳಲ್ಲಿ ಅಲ್ಲಿಯ ಶೈಲಿಯಲ್ಲೇ ಮಾತಾಡಲು ಪ್ರಯತ್ನಿಸಿದ್ದುಂಟು! 'ಅಂದ್, ಅತ್, ಅವೆಂಚಿನ ? ದಾನೆ ಮಾರ್ರೆ !' ಮುಂತಾಗಿ.

ಕೊಂಕಣಿ ಭಾಷಿಕರು ಪರಸ್ಪರ ಮಾತಾಡಿಕೊಳ್ಳುವಾಗ ಅಂಕಿಗಳನ್ನು ಕನ್ನಡದಲ್ಲೇ ಹೇಳಿಕೊಳ್ಳುತ್ತಿದ್ದರು. ಆ ಬಗ್ಗೆ ನನಗೆ ಅಚ್ಚರಿಯಗುತ್ತಿತ್ತು. ಉದಾಹರಣೆಗೆ: 'ಕಸ್ಸಲ ಮಾರಾಯ? ಆರೂವರೆ ಗಂಟೆ ಬಸ್ ನಾನವೆ?' ಎಂದರೆ, 'ಏನು ಮಾರಾಯ ! ಆರೂವರೆ ಗಂಟೆ ಬಸ್ಸು ಬರುವುದಿಲ್ಲವಂತಲ್ಲ?' ಎಂದು ಅರ್ಥ. ಅಂಗಡಿಗಳಲ್ಲಿ ವಸ್ತುಗಳ ಬೆಲೆಯನ್ನು ಸಹ ಅವರು ಕನ್ನಡದಲ್ಲಿ ಹೇಳುತ್ತಿದ್ದರು. ಇದರ ಕಾರಣ ಏನೇ ಇರಲಿ, ಕೊಂಕಣಿ ಭಾಷಿಕರಿಗೆ ಅಂಕಿಗಳನ್ನು ಕನ್ನಡದಲ್ಲೇ ಹೇಳುವುದು ವ್ಯಾವಹಾರಿಕ ದೃಷ್ಟಿಯಿಂದ ಸರಿಯಾಗಿತ್ತು ಎಂದು ಊಹಿಸಬಹುದು!

ಒಂದೇ ಒಂದು ನಾಟಕ ನೋಡಲು ಅವಕಾಶವಾಗಲಿಲ್ಲ. ಸಾಹಿತಿ ವಿಶುಕುಮಾರರ ಬಳಗ

ನಾಟಕವಾಡುತ್ತಿದ್ದು ಮಂಗಳೂರಿನಲ್ಲಿ. ಪುತ್ತೂರು ಮಾಲಿಂಗೇಶ್ವರ ದೇವಾಲಯದ ಸಮೀಪದ ಟೆಂಟಿನಲ್ಲಿ ಒಂದೆರಡು ಬಾರಿ ಯಕ್ಷಗಾನ ನೋಡಿದ್ದೆ. ಚಂಡೆಮದ್ದಳೆಗಳ ಸದ್ದಿಗೆ, ವೇಷಧಾರಿಗಳ ಆರ್ಭಟಕ್ಕೆ ಕಿವಿ ತೆರೆದಿದ್ದೆ.

ಪತ್ರಿಕೆ ಮುದ್ರಣವಾಗುತ್ತಿದ್ದುದು ಮಂಗಳೂರಿನ ಶಾಂತಾ ಪ್ರೆಸ್ಸಿನಲ್ಲಿ, ಅದಕ್ಕಾಗಿ ತಿಂಗಳಲ್ಲಿ ನಾಲ್ಕೈದು ಬಾರಿಯಾದರೂ ಮಂಗಳೂರಿಗೆ ಹೋಗಿ ಬರಬೇಕಾಗುತ್ತಿತು. ಮಂಗಳೂರಿನ ಬೀದಿಗಳನ್ನು ಪರಿಚಯ ಮಾಡಿಕೊಳ್ಳಲು ಅವಕಾಶ ಸಿಗುತ್ತಿತ್ತು.

ಹೊಸ ಗೆಳೆಯರೂ ಸಿಕ್ಕಿದರು. ಕವಿ ಕಿರಣ (ನಾವಿಬ್ಬರೂ ಒಂದು ಬಾಡಿಗೆ ಕೋಣೆಯಲ್ಲಿ ಉಳಿದುಕೊಂಡು ಸಾಹಿತ್ಯ ಸಲ್ಲಾಪ ನಡೆಸುತ್ತಿದ್ದೆವು), ಸುಬ್ರಾಯ ಚೊಕ್ಕಾಡಿ ಹಾಗು ಮಂಗಳೂರಿನಲ್ಲಿ ವಿಶುಕುಮಾರ ಇವರ ಸ್ನೇಹ ಲಭಿಸಿತು.


ಜೊತೆಗೆ, ಶಿವರಾಮ ಕಾರಂತರ ಪರಿಚಯವಾಯಿತು, ಅವರು ನಮ್ಮ ಪತ್ರಿಕೆಗೆ ಪ್ರತಿ ತಿಂಗಳೂ ಲೇಖನ ಬರೆದುಕೊಡುತ್ತಿದ್ದರು. ಅದನ್ನು ತರಲೆಂದು ನಾನು ಬಾಲವನಕ್ಕೆ ಹೋಗುತ್ತಿದ್ದೆ. ಆ ವೇಳೆಗೆ ಬಾಲವನದಲ್ಲಿ ಹಿಂದೆ ನಡೆಯುತ್ತಿದ್ದ ಅನೇಕ ಚಟುವಟಿಕೆಗಳು ನಿಂತು ಹೋಗಿದ್ದವು. ಅಲ್ಲಿಗೆ ಬರುತ್ತಿದ್ದ ಮಕ್ಕಳಿಗೆ ಪರಿಚಯ ಮಾಡಿಕೊಡಲೆಂದು ಕಾರಂತರು ಸಾಕಿದ್ದ ಪ್ರಾಣಿ ಪಕ್ಷಿಗಳಿರಲಿಲ್ಲ. ಹರ್ಷ ಮುದ್ರಣಾಲಯದ ಯಂತ್ರಗಳು ಕೆಲಸ ಮಾಡುತ್ತಿರಲಿಲ್ಲ. ಅಲ್ಲಿ ಬೈಂಡಿಂಗ್ ಕೆಲಸ ಮಾತ್ರ ನಡೆಯುತ್ತಿತ್ತು.

ಕಾರಂತರು ಮಹಡಿ ಮೇಲಿನ ತಮ್ಮ ಕೋಣೆಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದರು. ನನ್ನನ್ನು ಕಂಡ ಕೂಡಲೇ ಪತ್ನಿ ಲೀಲಾ ಕಾರಂತರಿಗೆ ವಿಷಯ ತಿಳಿಸುತ್ತಿದ್ದರು. ಬೆಳಗಿನ ಕಾಫಿ ತಿಂಡಿ ಜೊತೆಗೆ ಲೀಲಾ ಅವರ ಉಪಚಾರವೂ ಧಾರಾಳ ಸಿಗುತ್ತಿತ್ತು. ಒಮ್ಮೆ ಅವರ ಮನೆಯಲ್ಲಿ 'ಕೊಟ್ಟಿಗೆ' ಕಡಬು ಮಾಡಿದ್ದರು. ತುಪ್ಪ ಮತ್ತು ಚಟ್ನಿ ಜೊತೆಗೆ ನಾನು ಕಡುಬು ಮೆಲ್ಲುತ್ತಿದ್ದಾಗ, ಲೀಲಾ ಅವರು ಮಗಳಿಗೆ ಜಡೆ ಹೆಣೆಯುತ್ತ, ಹಲಸಿನ ಎಲೆಯನ್ನು ಹೊಲಿದು, ಹಬೆಯಲ್ಲಿ 'ಕೊಟ್ಟಿಗೆ' ಕಡುಬು ತಯಾರಿಸುವ ವಿಧಾನವನ್ನು ನನಗೆ ತಿಳಿಸಿದ್ದರು.

ಕಾರಂತರ ಮಕ್ಕಳಾದ ಮಾಳವಿಕಾ, ಕ್ಷಮಾ ಮತ್ತು ಉಲ್ಲಾಸರು ಆಗ ಎಂಟರಿಂದ ಹನ್ನೆರಡರ ಪ್ರಾಯದವರು. ಪುತ್ತೂರಿನ ಬೋರ್ಡ್ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದರು. ಹಿಂದಿನ ದಿನ ಶಾಲೆಯ ವಾರ್ಷಿಕೋತ್ಸವದಲ್ಲಿ ಮಾಳವಿಕಾರ ನೃತ್ಯ ಪ್ರದರ್ಶನವಿತ್ತೆಂದು ಕಾಣಿಸುತ್ತದೆ. ಉಲ್ಲಾಸ ಅಕ್ಕನ ನೃತ್ಯವನ್ನು ಕೀಟಲೆ ವಿಮರ್ಶೆಗೊಳಪಡಿಸಿದಾಗ, ಲೀಲಾ ಅವರು ಹುಸಿ ಕೋಪ ತೋರಿಸುತ್ತ 'ಹೋಗೋ ಅತ್ಲಾಗೆ' ಎಂದು ಆತನನ್ನು ಗದ್ದರಿಸಿದ್ದು, ಆದರೂ ಉಲ್ಲಾಸ ಕೀಟಲೆ ಮುಂದುವರಿಸಿದ್ದುದು ನನ್ನ ನೆನಪಿಗೆ ಬರುತ್ತಿದೆ.

ಕಾರಂತರು ನಿಗದಿತ ದಿನಕ್ಕೆ ಸರಿಯಾಗಿ ಲೇಖನ ಸಿದ್ಧಪಡಿಸಿಟ್ಟಿರುತ್ತಿದ್ದರು. ನೀಲಿ ಇಂಕಿನಲ್ಲಿ ಬರೆದ ಲೇಖನವನ್ನು ಮತ್ತೊಮ್ಮೆ ಓದುವಾಗ ಅಕ್ಷರ ದೋಷಗಳಿದ್ದರೆ ಹಸಿರು ಇಂಕಿನಲ್ಲಿ ತಿದ್ದಿರುತ್ತಿದ್ದರು.

ಆ ಸಂದರ್ಭದಲ್ಲಿ ಕಾರಂತರು 'ಬಾಲ ಪ್ರಪಂಚ' ಗ್ರಂಥ ರಚನೆಯಲ್ಲಿ ತೊಡಗಿಕೊಂಡಿದ್ದರು. ಅದು ಮಣಿಪಾಲ ಪ್ರೆಸ್ಸಿನಲ್ಲಿ ಮುದ್ರಣವಾಗುತ್ತಿತ್ತು. ಕಾರಂತರು ಪುತ್ತೂರಿನಿಂದಲೇ ಅದರ ಕರಡು ತಿದ್ದಿ ಕಳಿಸಿಕೊಡುತ್ತಿದ್ದರು. ಕೆಲವು ಚಿತ್ರಗಳನ್ನು ಅವರೇ ಬರೆಯುತ್ತಿದ್ದರು. ಸೃಜನಶೀಲ ಲೇಖಕರ ಆ ಕೋಣೆ ಇಂಡಿಯನ್ ಇಂಕ್ ಬ್ರಷ್ಷುಗಳು, ಬಗೆಬಗೆಯ ಬಣ್ಣದ ಡಬ್ಬಿಗಳು, ಕರಡುಗಳ ಜೊತೆಗೆ ಒಬ್ಬ ಕಲಾಕಾರನ ಕೋಣೆಯೂ ಆಗಿತ್ತು.



*ಬೆಂಗಳೂರಿನ ಕಲಾಕ್ಷೇತ್ರದಲ್ಲಿ ಚಿತ್ರ ರಚನೆಯಲ್ಲಿ ತೊಡಗಿರುವ ಕ್ಷಮಾ ಕಾರಂತ*

ಒಂದು ದಿನ, ನನ್ನ ಉಪಹಾರ ಮುಗಿದ ನಂತರ, ಲೇಖನ ನನ್ನ ಕೈಗಿತ್ತು ಕಾರಂತರು ಅಂಚೆ ಕಚೇರಿಗೆ ಹೊರಡಲು ತಯಾರಾದರು. ಜುಬ್ಬ, ಕಚ್ಚೆ ಪಂಚೆಧಾರಿಯಾದ ಕಾರಂತರ ಬಾಲಂಗೋಚಿಯಾಗಿ ನಾನು. ನಮ್ಮ ಸವಾರಿ ಅಂಚೆ ಕಚೇರಿಯತ್ತ ಹೊರಟಿತು! ದಾರಿಯಲ್ಲಿ ಎದುರಿಗೆ ಸಿಕ್ಕಿದ ಪರಿಚಿತರೊಂದಿಗೆ ಮಳೆ ಬೆಳೆ, ಅಡಿಕೆ ರೇಟು, ಮಾವಿನ ಮಿಡಿ, ಮಕ್ಕಳ ಶಾಲೆ ಮುಂತಾಗಿ ಸ್ನೇಹದ ಲೋಕಾಭಿರಾಮ ನಡೆಯಿತು. ಅಂಚೆ ಕಚೇರಿಯಲ್ಲಿ ತಮಗೆ ಬಂದಿದ್ದ ಕಾಗದ ಪತ್ರಗಳನ್ನು ಪಡೆದುಕೊಂಡು, ಅಂಚೆಗೆ ಹಾಕಬೇಕಾದವನ್ನು ಹಾಕಿ, ಪೇಟೆಬೀದಿಯಲ್ಲಿದ್ದ ಹೊಳ್ಳರ ಅಂಗಡಿಯತ್ತ ನಡೆದರು. ನಾನು ನಮ್ಮ ಆಫೀಸಿನತ್ತ ಹೆಜ್ಜೆ ಹಾಕಿದೆ.

ಕಾರಂತರು ಆಗಾಗ ಲೋಕಾಭಿರಾಮಕ್ಕಾಗಿ ಸೇರುತ್ತಿದ್ದ ಮತ್ತೊಂದು ಸ್ಥಳವೆಂದರೆ ಎ.ಕೆ. ಸುಬ್ಬಯ್ಯನವರ ಅಟ್ಟ. ಅವರು 'ಲೇ ಮಿಸರಬಲ್' ಕಾದಂಬರಿಯನ್ನು ಕನ್ನಡದಲ್ಲಿ 'ದುಃಖಾರ್ತರು' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿ ಖ್ಯಾತರಾಗಿದ್ದರು.

ಆ ಸಂದರ್ಭದಲ್ಲಿ ಕಾರಂತರನ್ನು ಕೆಲವು ಲೇಖಕರು 'ದೂರ್ವಾಸರು' ಎಂಬಂತೆ ಚಿತ್ರಿಸುತ್ತಿದ್ದರು. ಕಾರಂತರಿಗೆ ಇದ್ದಕ್ಕಿದ್ದಂತೆ ಸಿಟ್ಟು ಬಂದು ಎಗರಾಡಿ ಬಿಡುತ್ತಾರೆ ಎಂಬೆಲ್ಲ ಮಾತು ಜನಜನಿತವಾಗಿತ್ತು. ಆದರೆ ನನಗೆ ಅಂಥ ಅನುಭವವೇನೂ ಆಗಿರಲಿಲ್ಲ !

★★★

ಪುತ್ತೂರು ಬಿಟ್ಟ ನಂತರ, ಬೆಂಗಳೂರಿನಲ್ಲಿ ಒಂದೆರಡು ವರ್ಷ ಕೆಲಸ ಮಾಡಿ, ಅನಂತರ ಮದರಾಸಿಗೆ ತಲುಪಿದ್ದೆ. 1980ರ ದಶಕದವರೆಗೆ ಕಾರಂತರನ್ನು ಭೇಟಿ ಮಾಡುವ ಅವಕಾಶ ಒದಗಿರಲಿಲ್ಲ. ಅವರು ಯಕ್ಷಗಾನದಲ್ಲಿ ನೂತನ ಪ್ರಯೋಗ ಮಾಡುವ ಮೂಲಕ ಮತ್ತೊಂದು ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಮದರಾಸಿನ ಕಲಾಕ್ಷೇತ್ರದ ಬಗ್ಗೆ ಲೇಖನ ಬರೆಯುವ ಪ್ರಯತ್ನದಲ್ಲಿ ಒಂದೆರಡು ಬಾರಿ ಅಲ್ಲಿಗೆ ಹೋಗಿದ್ದೆ. ಹಾಗೊಮ್ಮೆ ವಿಷಯ ಸಂಗ್ರಹಿಸುತ್ತಿದ್ದಾಗ, ಚಿತ್ರಕಲಾ ವಿಭಾಗದ ಶಿಕ್ಷಕರಾಗಿದ್ದ ಆಂಜನೇಯಲು, 'ನಿಮ್ಮ ಕಾರಂತರ ಮಗಳು ನನ್ನ ವಿದ್ಯಾರ್ಥಿನಿ! ಬನ್ನಿ ಅವರನ್ನು ಭೇಟಿ ಮಾಡಿ' ಎಂದು ನನ್ನನ್ನು ತರಗತಿಗೆ ಕರದೊಯ್ದರು. ವಿದ್ಯಾರ್ಥಿನಿ ಕ್ಷಮಾ ಒಂದು ಕಿಟಕಿಯ ಬಳಿ ಕುಳಿತು ಚಿತ್ರ ರಚನೆಯಲ್ಲಿ ತೊಡಗಿದ್ದರು. ಕನ್ನಡದಲ್ಲಿ ಮಾತಾಡಿಸಿದಾಗ ಅವರ ಮುಖ ಅರಳಿತು. ನನ್ನ ಪುತ್ತೂರು ನೆನಪನ್ನು ಬಿಚ್ಚಿದೆ. ಸುಮಾರು ಆರೇಳು ಸಲ ಮಾತ್ರ ಅವರ ಮನೆಗೆ ಹೋಗಿದ್ದ ನನ್ನ ನೆನಪು ಅವರಿಗಿದ್ದಿರಲು ಸಾಧ್ಯವಿರಲಿಲ್ಲ. ಅವರು ಚಿತ್ರ ರಚಿಸುತ್ತಿದ್ದ ಭಂಗಿಯಲ್ಲಿ ಒಂದೆರಡು ಫೋಟೊ ಕ್ಲಿಕ್ಕಿಸಿದೆ.

ಕಾರಂತರು ಒಮ್ಮೆ ಮದರಾಸಿನ ತ್ಯಾಗರಾಯ ನಗರದಲ್ಲಿರುವ ಕರ್ನಾಟಕ ಸಂಘದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಬಂದಿದ್ದಾಗ ಅವರನ್ನು ಮತ್ತೆ ಭೇಟಿ ಮಾಡುವ ಅವಕಾಶ ದೊರಕಿತು.

ಆಫೀಸು ಕೋಣೆಯಲ್ಲಿ ಕುಳಿತು ಗೆಳೆಯರೊಂದಿಗೆ ಮಾತಾಡುತ್ತಿದ್ದರು ಶಿಂಗಣ್ಣನ ಪತ್ರಿಕೆಯ ಹೆಸರು ಹೇಳಿ ನನ್ನ ಪರಿಚಯ ಮಾಡಿಕೊಂಡೆ, ಅವರ ನೆನಪು ಹಿಂದಕ್ಕೋಡಿತು. ಮುಖದಲ್ಲಿ ಪರಿಚಯದ ನಗೆ ಅರಳಿತು.

ಆ ವೇಳೆಗೆ ನಾನು ಹೆಗಲ ಚೀಲದಲ್ಲಿ ಕ್ಯಾಮೆರಾ ಹಾಕಿಕೊಂಡು ತಿರುಗಾಡುವ ಹವ್ಯಾಸಕ್ಕೆ ಬಿದ್ದಿದ್ದೆ. ಸಹಜ ಭಂಗಿಯಲ್ಲಿ ಅವರ ಫೋಟೊ ತೆಗೆಯುವ ಉದ್ದೇಶದಿಂದ, 'ಹಾಗೇ ಮಾತಾಡುತ್ತ ಇರಿ ಸಾರ್!' ಎನ್ನುತ್ತ ಫೋಕಸ್ ಮಾಡತೊಡಗಿದೆ. ಒಂದೆರಡು ಫೋಟೊ ತೆಗೆದಿರಬಹುದು. ಕಾರಂತರು ದೊಡ್ಡದಾಗಿ ನಕ್ಕು 'ನೀವು ಮಾತುಗಳನ್ನೂ ಫೋಟೊ ತೆಗೆಯುವವರೋ!' ಎನ್ನುತ್ತ ಅಲ್ಲಿದ್ದವರನ್ನು ನಗೆಯಲ್ಲಿ ಮುಳುಗಿಸಿದರು.

ಆ ನಗೆಯ ಅಲೆಯಲ್ಲಿ ನಾನೂ ತೇಲಿದೆ ! (ಚಿತ್ರಗಳು: ಲೇಖಕರವು)

## ಪರಂಜ್ಯೋತಿ

ಪರಂಜ್ಯೋತಿ, ನೀಲಾಂಬರಿ ಎಂಬ ಕಾವ್ಯನಾಮಗಳಲ್ಲಿ ಪತ್ರಿಕೆಗಳಿಗೆ ಬರೆಯುತ್ತ ಬಂದವರು ಕೆ.ಪಿ. ಸ್ವಾಮಿ. ಅವರ ಕಾದಂಬರಿ, ಕಥಾ ಸಂಗ್ರಹ, ಪ್ರಬಂಧ, ಪ್ರವಾಸ ಸಾಹಿತ್ಯ, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆಗಳಿಗೆ ಸೇರಿದಂತೆ 30 ಪುಸ್ತಕಗಳು ಪ್ರಕಟವಾಗಿವೆ. ಅವರ ಬರವಣಿಗೆಯ ಬದುಕಿಗೆ ಈಗ ಅರ್ಧಶತಮಾನ.

ಹುಟ್ಟಿದ್ದು ನೀಲಗಿರಿಯಲ್ಲಿ, ಓದಿದ್ದು ಮಂಡ್ಯದಲ್ಲಿ. ಚಹಾ ಎಸ್ಟೇಟ್‌ನಲ್ಲಿ ಮೇಸ್ತ್ರಿಯಾಗಿ ವೃತ್ತಿ ಆರಂಭಿಸಿದ ಅವರು ಅಪ್ಪರ್ ಭವಾನಿ ಅಣೆಕಟ್ಟೆ ಯೋಜನೆಯಲ್ಲಿ, ಪುತ್ತೂರಿನಿಂದ ಪ್ರಕಟವಾಗುತ್ತಿದ್ದ 'ಇಂದ್ರಧನುಸ್' ಮಾಸಪತ್ರಿಕೆ, ಬೆಂಗಳೂರಿನಿಂದ ಹೊರಡುತ್ತಿದ್ದ 'ಪ್ರಪಂಚ' ವಾರಪತ್ರಿಕೆಗಳಲ್ಲಿ ಪತ್ರಕರ್ತರಾಗಿ ಕೆಲಸ ಮಾಡಿದ್ದಾರೆ. ಚೆನ್ನೈನ ಸೋವಿಯತ್ ಸಮಾಚಾರ ಇಲಾಖೆಯಲ್ಲಿ ಗುಮಾಸ್ತರಾಗಿ, ಅನುವಾದಕರಾಗಿ 25 ವರ್ಷ ಕೆಲಸ ಮಾಡಿ, ಬಳಿಕ ನವಕರ್ನಾಟಕ ಪ್ರಕಾಶನದಲ್ಲಿ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಮಕ್ಕಳ ಪುಸ್ತಕಗಳು, ಹಿಂದಿ, ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.

## ನವಿಲುಗನ್ನಡಿ

ಏಪ್ರಿಲ್ 2016ರ ಸಂಚಿಕೆ ಹೊಸ ವಿನ್ಯಾಸದ ಮುಖಪುಟದಿಂದ ಆಕರ್ಷಿಸಿತು. ಈ ಸಂಚಿಕೆಯ ಎಲ್ಲ ಕತೆಗಳೂ ಸೊಗಸಾಗಿವೆ. 'ಒಂದು ನಾಪತ್ತೆ ಪ್ರಸಂಗ' ಮತ್ತು 'ಯಾರು?' ಕತೆಗಳು ತಮ್ಮ ಪತ್ತೇದಾರಿ ನಿರೂಪಣೆಯಿಂದಾಗಿ ಆಕರ್ಷಿಸುತ್ತವೆ. 'ಸಂಜೆ ಆರರ ರೈಲು' ಕತೆ ವಸ್ತು, ತಂತ್ರ ಹಾಗೂ ಶೈಲಿಯಿಂದಾಗಿ ಮನ ಮುಟ್ಟುವಂತಿದೆ.

**ಎನ್. ಮಹಾದೇವ, ಚೆನ್ನೈ**

ರೇಣುಕಾ ನಿಡಗುಂದಿ ಅವರ 'ಎಲ್ಲಿಗೂ ತಲುಪದವರು' ಕತೆ ಹೆಣ್ಣಿನ ಅಸಹಾಯಕತೆಯ ಪ್ರತಿಬಿಂಬವಾಗಿದೆ. ಜೆ.ವಿ. ಕಾರ್ಲೊ ಅವರು ಅನುವಾದಿಸಿರುವ ಕತೆ 'ಎಡಗೈ ಕಿರುಬೆರಳು' ಓದಿದಾಗ ಎದೆ ಝಲ್ ಅಂತು. ಜಗತ್ತಿನಲ್ಲಿ ಇಂತಹವರು ಇರುತ್ತಾರಾ ಅನಿಸಿತ್ತು.

**ನೀಲಮ್ಮ ಕುಮಾರಪ್ಪ, ಲಿಂಗಸುಗೂರು**

ನಾಗರಾಜ ವಸ್ತಾರೆಯವರ ಕತೆ 'ಅಸಂಗೋಹಂ ಪುನಃ ಪುನಃ' ಸಂಬಂಧಗಳಿಗಿಂತ ಅಧ್ಯಾತ್ಮಕ್ಕೆ ಹೆಚ್ಚು ಒತ್ತು ನೀಡಿದೆ. ಬನವಾಸಿ ವೆಂಕಟೇಶ ದೀಕ್ಷಿತರ ಕತೆ 'ಜೋರ್ಡಾನ್ ಮತ್ತು ಉತ್ತರಾಯಣ' ಸುಖಾಂತ್ಯಗೊಂಡಿದ್ದು ಖುಷಿ ತಂದಿದೆ. 'ಎಡಗೈ ಕಿರುಬೆರಳು' ಕತೆ ಕೊನೆವರೆಗೆ ಕುತೂಹಲ ಉಳಿಸಿಕೊಂಡಿತು. 'ಸಂಜೆ ಆರರ ರೈಲು' ಮತ್ತೆ ಮತ್ತೆ ಓದಬೇಕೆನ್ನುವ ಕತೆಯಾಗಿದೆ. ಹೇಮಲತಾ ಮಹಿಷಿಯವರ 40 ವರ್ಷ ಹಿಂದಿನ ಕತೆ 'ಹಾವು' ಇಂದಿಗೂ ಹೆಣ್ಣು ಮಕ್ಕಳು ಎದುರಿಸುತ್ತಿರುವ ವಾಸ್ತವವನ್ನು ತೆರೆದಿಟ್ಟಿದೆ.

**ಕುಸುಮ, ಬೆಜ್ಜವಳ್ಳಿ**




ಈ ಸಂಚಿಕೆ ಮುದ ನೀಡಿತು. ಕತೆಗಳೆಲ್ಲ ಅರ್ಥಪೂರ್ಣವಾಗಿವೆ. ಚಿಕ್ಕದಾದ, ಚೊಕ್ಕದಾದ, ಮುದ್ದಾದ 'ಮಯೂರ' ಓದಲು ತುಂಬಾ ಖುಷಿಯಾಗುತ್ತದೆ. ಹೀಗೆಯೇ ಮುಂದುವರಿಯಲಿ ಪತ್ರಿಕೆಯ ಪಯಣ.

**ಅ. ಮೃತ್ಯಂಜಯ, ಮಡಿಕೇರಿ**

ರೇಣುಕಾ ರಮಾನಂದರ ಕವಿತೆ 'ಭತ್ತ' ಉತ್ತಮವಾಗಿದ್ದು ಇಂದಿನ ಮಕ್ಕಳಿಗೆ ತಿಳಿ ಹೇಳುವಂತಿದೆ. ವಿದ್ಯಾರ್ಥಿಯಾದ ನಾನು ಕೂಡಾ ಅಡುಗೆ ಮನೆಯಲ್ಲಿರುವ ಸಾಂಬಾರು ಪದಾರ್ಥಗಳ ಬಗ್ಗೆ ಅಮ್ಮನಿಂದ ತಿಳಿದುಕೊಂಡೆನು.ಈ ಸಲದ ಮಳೆಗಾಲದಲ್ಲಿ ಗದ್ದೆಗೆ ಹೋಗಿ ಭತ್ತ ಬೆಳೆಯುವ ರೀತಿಯನ್ನು ತಿಳಿಯಬೇಕೆಂದಿದ್ದೇನೆ.

**ಸುಶಾಂಕ್ ಎಸ್., ಗಬಡಿ**

'ಅಸಂಗೋಹಂ...' ಕತೆಯಲ್ಲಿ ಗಂಡ – ಹೆಂಡತಿಯರು ಮಾನಸಿಕವಾಗೂ ದೈಹಿಕವಾಗೂ ದೂರವೇ ಆಗಿಬಿಟ್ಟಿದ್ದಾರೆ. ಇನ್ನು ಡೈವೋರ್ಸ್ ಎಂಬ ಸರ್ಕಾರಿ ಪರವಾನಗಿ ಯಾರಿಗೆ ಬೇಕು ಎಂಬುದನ್ನು ಸೂಚಿಸುವಂತಿದೆ. 'ಜೋರ್ಡಾನ್....' ಕತೆ ಓದಿದಾಗ ಸ್ವಂತ ಅನುಭವವೇ ಜ್ಞಾಪಕಕ್ಕೆ ಬಂತು.

**ಶ್ರೀನಾಥ್ ಕೊನೇಟಿ, ಬೆಂಗಳೂರು**